**ದಿನಾಂಕ: 16-03-2023 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 40ನೇ ಸಭೆಯ ನಡವಳಿಗಳು**

**:ಅಧ್ಯಕ್ಷತೆ:**

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್**

**ಸನ್ಮಾನ್ಯ ಕಾರ್ಮಿಕ ಸಚಿವರು**

**ಹಾಗೂ**

**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.**

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿ ಸದಸ್ಯರುಗಳು:**

1. ಶ್ರೀ ಶಂಕರ್ ಸುಲೇಗಾವ್, ಅಧ್ಯಕ್ಷರು. ಭಾರತೀಯ ಮಜ್ದೂರ್ ಸಂಘ, ಬೆಂಗಳೂರು.
2. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದ್ ಮಜ್ದೂರು ಸಂಘ, ಬೆಂಗಳೂರು
3. ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು ಇವರ ಪರವಾಗಿ ಶ್ರೀ ವೆಂಕಟೇಶ್ ವಿ. ಪ್ರಧಾನ ಕಾರ್ಯದರ್ಶಿಗಳು, ಐಎನ್‌ಟಿಯುಸಿ, ಬೆಂಗಳೂರು
4. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಾಲೀಕರ ಪ್ರತಿನಿಧಿಗಳು:**

2. ಅಧ್ಯಕ್ಷರು, CREDAI, ಬೆಂಗಳೂರು.

3. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪರವಾಗಿ ಶ್ರೀ ದುಷ್ಯಂತ ರಾಜನಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

**ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮನಿರ್ದೇಶಿತ ಸದಸ್ಯರು:**

1. ಡಾ|| ಎನ್ ವಿ ಪ್ರಸಾದ್, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು

**ಗೈರು ಹಾಜರಿದ್ದವರು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
2. ಅಧ್ಯಕ್ಷರು, Construction Federation of India, New Delhi.
   ಅಧ್ಯಕ್ಷರು, ಬಿಲ್ಡರ್ಸ್ ಅಸೋಷಿಯೇಷನ್ ಆಫ್ ಇಂಡಿಯಾ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು-ಇವರ ಪರವಾಗಿ ಶ್ರೀ ಕೆ ಸಿ ದೇವರಾಜುಗೌಡ, ನಿರ್ದೇಶಕರು, ಆಡಳಿತ

ಮಂಡಳಿಯಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸನ್ಮಾನ್ಯ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಇವರಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಹಾಗೂ ಮಂಡಳಿಯ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು ಹಾಗೂ ಮಂಡಳಿಯ 40ನೇ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರನ್ನು ಕೋರಿ ಕೊಂಡರು.

ನಂತರ ಮಾನ್ಯ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಕಾರ್ಯದರ್ಶಿಯವರು ಮಂಡಳಿಯ ಎಲ್ಲಾ ಸದಸ್ಯರು/ಪ್ರತಿನಿಧಿಗಳಿಗೆ ಸ್ವಾಗತಿಸಿ ಶುಭಕೋರಿದರು.

ಮಂಡಳಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ದಿನಾಂಕ:15-02-2023ರಂದು ನಡೆದ 39ನೇ ಮಂಡಳಿ ಸಭೆಯ ನಡವಳಿಗಳಿಗೆ ತೆಗೆದುಕೊಂಡ ಕ್ರಮದ ಕುರಿತು ಸಭೆಗೆ ಮಾಹಿತಿ ನೀಡಿದರು ಮತ್ತು ಅದನ್ನು ಸ್ಥಿರೀಕರಿಸಲು ಸಭೆಯನ್ನು ಕೋರಿದರು. ಹಾಜರಿದ್ದ ಮಂಡಳಿಯ ಸದಸ್ಯರೆಲ್ಲರ ಸಹಮತದೊಂದಿಗೆ ಮಂಡಳಿಯ 39ನೇ ಸಭೆಯ ನಡವಳಿಗಳಿಗೆ ಒಪ್ಪಿಗೆ ಸೂಚಿಸಿ ನಡವಳಿಗಳನ್ನು ಸ್ಥಿರೀಕರಿಸಲಾಯಿತು.

## ವಿಷಯ ಸಂಖ್ಯೆ-02

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಆದಾಯ ತೆರಿಗೆ ಕಾಯ್ದೆ 1961 ಪರಿಚ್ಛೇದ 10(46) ರಡಿಯಲ್ಲಿ ವಿನಾಯಿತಿ ಪಡೆದಿರುವ ಕುರಿತು**

ಮಂಡಳಿಯಲ್ಲಿ ಸ್ವೀಕೃತವಾಗುವ ಸುಂಕ ಮೊತ್ತ, ನೋಂದಣಿ ಮತ್ತು ನವೀಕರಣ ಶುಲ್ಕ ಮತ್ತು ಬಡ್ಡಿ ಮೊತ್ತ ಇವುಗಳ ಒಟ್ಟು ಮೊತ್ತದಲ್ಲಿ, ಯಾವುದೇ ಹಣಕಾಸು ವರ್ಷದಲ್ಲಿ ಶೇ. 85 ರಷ್ಟನ್ನು ಯಾವ ಉದ್ದೇಶಕ್ಕಾಗಿ ಸಂಗ್ರಹಣೆಯಾಗುವುದೋ ಅದಕ್ಕೆ ವಿನಿಯೋಗಿಸಬೇಕೆಂದು ಆದಾಯ ತೆರಿಗೆ ಕಾಯ್ದೆಯಲ್ಲಿ ನಿಬಂಧನೆ ಇದೆ. ಆದರೆ ಮಂಡಳಿಯು ಈ ಹಿಂದಿನ ವರ್ಷಗಳಲ್ಲಿ ಶೇ. 85 ರಷ್ಟನ್ನು ವಿನಿಯೋಗಿಸಿರಲಿಲ್ಲ. ಈ ಹೆಚ್ಚುವರಿ ಮೊತ್ತವನ್ನ  ಮಂಡಳಿಯ ಆದಾಯವೆಂದು ಪರಿಗಣಿಸಿ ಆದಾಯ ತೆರಿಗೆ ಇಲಾಖೆಯವರು ತೆರಿಗೆ ವಿಧಿಸಿ ವಸೂಲಿಗಾಗಿ ಕ್ರಮ ಜರುಗಿಸಲಾಗುತ್ತಿತ್ತು ಈ ಸಂಬಂಧ ಆದಾಯ ತೆರಿಗೆ ಕಾಯ್ದೆ 1961 ಪರಿಚ್ಛೇಧ 10(46) ರಡಿಯಲ್ಲಿ ವಿನಾಯಿತಿ ಪಡೆಯಲು ಅವಕಾಶವಿದೆ ಅದರಂತೆ ಮಂಡಳಿಯು ದಿನಾಂಕ:28.08.2018 ರಲ್ಲಿ ದಿನಾಂಕ:01.06.2011 ರಿಂದ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಲಾಗಿತ್ತು, ಆದರೆ ಮಂಡಳಿಯ ಪರಿಚ್ಛೇದ 12 A ರಡಿಯಲ್ಲಿ ನೋಂದಣಿಯಾಗಿರುವುರಿಂದ ಅರ್ಜಿಯನ್ನು ಪುರಸ್ಕರಿಸಿರಲಿಲ್ಲ. 2020ನೇ ಸಾಲಿನ ಹಣಕಾಸು ಕಾಯ್ದೆ ಅಡಿಯಲ್ಲಿ ಪರಿಚ್ಛೇಧ 11(7) ಕ್ಕೆ ತಿದ್ದುಪಡಿ ತಂದು ಯಾವುದೇ ಸಂಸ್ಥೆ 12 A ರಡಿಯಲ್ಲಿ ನೋಂದಣಿ ಪಡೆದಿದ್ದರೂ ಸಹ ಅಂತಹ ಸಂಸ್ಥೆಗಳು ಪರಿಚ್ಛೇಧ 10 (46) ರಡಿಯಲ್ಲಿ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ. ಮಂಡಳಿಯ ಮಾನ್ಯ ಅಧ್ಯಕ್ಷರು ಹಾಗೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾರ್ಯದರ್ಶಿ ಮತ್ತು ಮುಖ್ಯ ನಿರ್ವಹಣಾಧಿಕಾರಿಯವರ ನೇತೃತ್ವದಲ್ಲಿ ದಿನಾಂಕ:25.01.2022 ರಂದು ಮತ್ತೊಮ್ಮೆ ಅರ್ಜಿ ಸಲ್ಲಿಸಿ ನಿರಂತರವಾಗಿ ಆದಾಯ ತೆರಿಗೆ ಇಲಾಖೆಯವರ ಜೊತೆ ಸಂಪರ್ಕಿಸಿದ ಪರಿಣಾಮವಾಗಿ ಭಾರತದ ಸರ್ಕಾರ ಆದಾಯ ತೆರಿಗೆ ಇಲಾಖೆಯು ದಿನಾಂಕ:03.03.2023 ರಂದು ಆದಾಯ ತೆರಿಗೆಯಿಂದ ವಿನಾಯಿತಿ ನೀಡಿ ಅಧಿಸೂಚನೆ ಹೊರಡಿಸಲಾಗಿದೆ.

ಈ ಹಿಂದೆ AY 2015-16 ನೇ ಸಾಲಿಗೆ ರೂ. 413.08 ಕೋಟಿಯನ್ನು ಮಂಡಳಿಯ ಬ್ಯಾಂಕ್ ಖಾತೆಯಿಂದ ಆದಾಯ ತೆರಿಗೆ ಇಲಾಖೆಯವರು ಮುಟ್ಟುಗೋಲು ಹಾಕಿಕೊಂಡಿರುತ್ತಾರೆ. 2016-17ನೇ ಸಾಲಿಗೂ ಆದಾಯ ತೆರಿಗೆ ಇಲಾಖೆಯವರು scrutiny asessement ಮಾಡಿ ರೂ. 402.93 ಕೋಟಿ ವಸೂಲಾತಿಗೆ ತಗಾದೆ ನೋಟಿಸ್ (Demand Notice) ಅನ್ನು ಕಳುಹಿಸಲಾಗಿತ್ತು ಇದಕ್ಕೆ ಮಂಡಳಿಯು

ರೂ. 100.41 ಕೋಟಿ ತೆರಿಗೆ ಸಲ್ಲಿಸಿ CIT (Appeals) Bangalore ಇವರಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. ಪ್ರಕರಣವೂ 2 ಬಾರಿ ವಿಚಾರಣೆಯಾಗಿರುತ್ತದೆ. ಮುಂದಿನ ಆದೇಶದ ನಿರೀಕ್ಷಣೆಯಲ್ಲಿದೆ ಮತ್ತು AY 2012-13 ರಿಂದ 2014-15ರವರೆಗೆ ಆದಾಯ ತೆರಿಗೆ ಇಲಾಖೆಯವರು ಪರಿಚ್ಛೇಧ 148 ರಡಿಯಲ್ಲಿ asessement ಅನ್ನು ರೀ ಓಪನ್ ಮಾಡಿ ಈ 3 ವರ್ಷಗಳಿಗೂ asessement ಅನ್ನು ಕೈಗೊಳ್ಳುವ ಹಂತದಲ್ಲಿ ಇರುವಾಗ ಮಂಡಳಿಯೂ ಮುನ್ನೆಚ್ಚರಿಕೆ ವಹಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ತಡೆಯಾಜ್ಞೆ ಪಡೆಯಾಲಾಗಿದೆ. ಮುಂದುವರೆದು AY 2017-18 ಹಾಗೂ 2018-19 ನೇ ಸಾಲುಗಳಿಗೆ scrutiny asessement ಮಾಡಿ ಕ್ರಮವಾಗಿ ರೂ. 387.00 ಹಾಗೂ 400.79 ಕೋಟಿ ತಗಾದೆ ನೋಟಿಸನ್ನು ಮಂಡಳಿಗೆ ಕಳುಹಿಸಲಾಗಿತ್ತು. ಈ ಸಂಬಂಧ ಕೂಡ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ತಡೆಯಾಜ್ಞೆ ಪಡೆಯಾಲಾಗಿದೆ. ಈ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಇಲಾಖೆಗೆ ಪಾವತಿಸಿರುವ ಒಟ್ಟು ಮೊತ್ತ ಸುಮಾರು ರೂ. 513.49 ಕೋಟಿಯನ್ನು ಬಡ್ಡಿ ಸಹಿತ ಮಂಡಳಿಯು ಹಿಂಪಡೆಯಲು ವಹಿಸಬೇಕಾದ ಕ್ರಮಗಳನ್ನು ಅಂದರೆ 10(46) Notification ಅನ್ನು Retrospective ಆಗಿ ಪಡೆಯಲು ಅನುಸರಿಬೇಕಾದ ಕ್ರಮಗಳ ಕುರಿತು, ಮಂಡಳಿಯ ಕಾರ್ಯದರ್ಶಿ ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಲು ಹಾಗೂ ಈ ಬಗ್ಗೆ ವ್ಯಾಪಕ ಪ್ರಚಾರ ನೀಡಲು ಸಭೆಯ ಅನುಮೋದನೆ ನೀಡಬೇಕೆಂದು ಮಂಡಿಸಿದರು

**ತೀರ್ಮಾನ: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಆದಾಯ ತೆರಿಗೆ ಕಾಯ್ದೆ 1961 ಪರಿಚ್ಛೇದ 10(46) ರಡಿಯಲ್ಲಿ ವಿನಾಯಿತಿ ಪಡೆದಿರುವ ಕುರಿತು ವಿಷಯವನ್ನು ಸಭೆಯ ಗಮನಕ್ಕೆ ತರಲಾಗಿ ಮಾನ್ಯ ಅಧ್ಯಕ್ಷರು ಕಾರ್ಮಿಕರ ಹಣವನ್ನು ಕಾರ್ಮಿಕರಿಗೆ ತಲುಪಿಸಿ ಅದರ ಸದುಪಯೋಗ ಕಾರ್ಮಿಕರು ಪಡೆಯುವಂತೆ ತಿಳಿಸಿ, ಮಂಡಳಿಯ ಕಾರ್ಯವೈಖರಿಯನ್ನು ಶ್ಲಾಘಿಸಿದರು. ಸದರಿ ವಿಷಯದ ಕುರಿತು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ಪಡೆಯಲಾಯಿತು.**

**ವಿಷಯ ಸಂಖ್ಯೆ: 03**

**ಮಂಡಳಿಯ ಶೈಕ್ಷಣಿಕ ಧನಸಹಾಯ ಸೌಲಭ್ಯಕ್ಕಾಗಿ ಸೇವಾಸಿಂಧು ತಂತ್ರಾಂಶದ ಮೂಲಕ ಸ್ವೀಕೃತಗೊಳ್ಳುವ ಅರ್ಜಿಗಳನ್ನು ಡಿಬಿಟಿ ತಂತ್ರಾಂಶದ ಮೂಲಕ ಪಾವತಿಸಲು ಅನುಕೂಲವಾಗುವಂತೆ ಲಾಗಿನ್ ಐಡಿಗಳ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಟ್ಟಡ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಸೌಲಭ್ಯಗಳ ಅರ್ಜಿಗಳು ಸೇವಾಸಿಂಧು ತಂತ್ರಾಂಶದ ಮೂಲಕ ಸ್ವೀಕೃತಗೊಳ್ಳುತ್ತಿದ್ದು, ಸದರಿ ಅರ್ಜಿಗಳನ್ನು ಕಾರ್ಮಿಕ ನಿರೀಕ್ಷಕರು/ ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಕಾರ್ಮಿಕ ಅಧಿಕಾರಿಗಳು ಅನುಮೋದನೆ ನೀಡುತ್ತಿರುತ್ತಾರೆ. ಮಂಡಳಿಯು ನೋಂದಾಯಿತ ಕಟ್ಟಡ ಕಾರ್ಮಿಕರ ಇಬ್ಬರು ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ಸೌಲಭ್ಯವನ್ನು ನೀಡುತ್ತಿದ್ದು, ಸದರಿ 2022-23ನೇ ಸಾಲಿನ ಶೈಕ್ಷಣಿಕ ಸಹಾಯಧನದ ಅರ್ಜಿಗಳ ಸ್ವೀಕಾರವನ್ನು ಸೇವಾ ಸಿಂಧು ತಂತ್ರಾಂಶದ ಮೂಲಕ ಪ್ರಾರಂಭಿಸಲು ದಿನಾಂಕ:06/02/2023 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಇ-ಆಡಳಿತ ಇಲಾಖೆ ರವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. 2022-23ನೇ ಸಾಲಿನ ಶೈಕ್ಷಣಿಕ ಸಹಾಯಧನದ ಅರ್ಜಿಗಳ ಸ್ವೀಕಾರವನ್ನು ಸೇವಾ ಸಿಂಧು ತಂತ್ರಾಂಶದ ಮೂಲಕ ದಿನಾಂಕ:13/02/2023 ರಿಂದ ಪ್ರಾರಂಭಿಸಲಾಗಿರುತ್ತದೆ.

Pre-Matric (Class 1 to 10) ಶೈಕ್ಷಣಿಕ ಸಹಾಯಧನಕ್ಕಾಗಿ ಅನುಮೋದನೆಗೊಳ್ಳುವ ಅರ್ಜಿಗಳನ್ನು ಆಯಾ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರು ಸಹಾಯಧನವನ್ನು ಡಿಬಿಟಿ ತಂತ್ರಾಂಶದ ಮೂಲಕ ಪಾವತಿಸಲು ಅನುಕೂಲವಾಗುವಂತೆ ಒಟ್ಟು 11 ಲಾಗಿನ್ ಐಡಿಗಳನ್ನು ಹಾಗೂ Post-Matric (PUC & above) ಶೈಕ್ಷಣಿಕ

ಸಹಾಯಧನಕ್ಕಾಗಿ ಅನುಮೋದನೆಗೊಳ್ಳುವ ಆಯಾ ಪ್ರಾಧೇಶಿಕದ ಉಪ ಕಾರ್ಮಿಕ ಆಯುಕ್ತರು ಸಹಾಯಧನವನ್ನು ಡಿಬಿಟಿ ತಂತ್ರಾಂಶದ ಮೂಲಕ ಪಾವತಿಸಲು ಅನುಕೂಲವಾಗುವಂತೆ ಒಟ್ಟು 05 ಲಾಗಿನ್ ಐಡಿಗಳನ್ನು ಡಿಬಿಟಿ ತಂತ್ರಾಂಶದಲ್ಲಿ ರಚಿಸಿ ಪಾವತಿಸಲು ಅನುಮತಿ ಕೋರಿ.

**ತೀರ್ಮಾನ: ಕಳೆದ ಸಾಲಿನಲ್ಲಿ 2021-22 ರಲ್ಲಿ ಬಾಕಿ ಇರುವ ಶೈಕ್ಷಣಿಕ ಸಹಾಯಧನದ ಅರ್ಜಿಗಳನ್ನು ಒಳಗೊಂಡಂತೆ ಮತ್ತು ಪ್ರಸ್ತುತ ಸಾಲಿನ 2022-23ನೇ ಶೈಕ್ಷಣಿಕ ಸಹಾಯಧನದ ಅರ್ಜಿಗಳನ್ನು ಕ್ಷೇತ್ರ ಮಟ್ಟದ ಕಾರ್ಮಿಕ ಇಲಾಖೆಯ ಅಧಿಕಾರಿಗಳಾದ ಉಪ ಕಾರ್ಮಿಕ ಆಯುಕ್ತರು ಹಾಗೂ ಸಹಾಯಕ ಕಾರ್ಮಿಕ ಆಯುಕ್ತರ ಹಂತದಲ್ಲಿಯೇ ವಿಲೇವಾರಿ ಮಾಡಲು ಕ್ರಮಕೈಗೊಳ್ಳುವಂತೆ ತಿಳಿಸುತ್ತಾ ಜೊತೆಗೆ ಅರ್ಜಿ ವಿಲೇವಾರಿ ಮಾಡುವಾಗ ಫಲಾನುಭವಿಗಳ ಮೊದಲ ಇಬ್ಬರು ಮಕ್ಕಳನ್ನು ಹೊರತು ಪಡಿಸಿ ಮೂರನೇ ಮಗುವಿಗೆ ಸಹಾಯಧನ ತಲುಪದಂತೆ ಕ್ರಮವಹಿಸಿ ಸರಿಯಾದ ಮಾಹಿತಿಯೊಂದಿಗೆ ವಿಲೇವಾರಿ ಮಾಡತಕ್ಕದ್ದು. ಹಾಗೆಯೇ ಮಂಡಳಿಯ ಮುಖಾಂತರ ಜಾಹಿರಾತು ಹೊರಡಿಸುವಾಗ ಹಿಂದಿನ ವರ್ಷಗಳಲ್ಲಿ ಬಾಕಿ ಇರುವ ಅರ್ಜಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸೇರಿಸಿ ಪ್ರಚಾರ ಪಡಿಸಲು ಮಾನ್ಯ ಅಧ್ಯಕ್ಷರು ತಿಳಿಸಿದರು. ಈ ವಿಷಯದ ಕುರಿತು ಸಭೆಯು ಸುಧೀರ್ಘವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ: 4

**2022-23 ನೇ ಸಾಲಿನ ಶೈಕ್ಷಣಿಕ ಸಹಾಯಧನಕ್ಕೆ ಅರ್ಜಿ ಸಲ್ಲಿಸಲು ನಿಗಧಿ ಪಡಿಸಿದ ಕೊನೆಯ ದಿನಾಂಕವನ್ನು ವಿಸ್ತರಿಸಲು ಅನುಮತಿ ಕೋರಿ.**

ಪ್ರಸ್ತುತ ವರ್ಷದ ಶೈಕ್ಷಣಿಕ ಸಹಾಯಧನದ ಅರ್ಜಿಗಳನ್ನು ಸೇವಾ ಸಿಂಧು ತಂತ್ರಾಂಶದ ಮೂಲಕ ಸ್ವೀಕರಿಸಲಾಗುತ್ತಿದ್ದು ಕೊನೆಯ ದಿನಾಂಕವನ್ನು 15/04/2023 ರಂದು ನಿಗಧಿ ಪಡಿಸಲಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಕುಲಸಚಿವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ರವರು ದಿನಾಂಕ:22/02/2023 ರಂದು ಪತ್ರದ ಮೂಲಕ ಈ ಕೆಳಕಂಡ ಕಾರಣದಿಂದ ಶೈಕ್ಷಣಿಕ ಸಹಾಯಧನಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ವಿಸ್ತರಿಸುವಂತೆ ಕೋರಿರುತ್ತಾರೆ. ಈ ವಿಷಯವನ್ನು ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

Because of the pandemic hit, in the last 2 years, the duration of the course year of the all the courses under RGUHS got extended approximately for up to 6 to 8 months. Due to this examinations and result announcements dates are also got postponed.

| SL. NO | Course | Tentative Admission Approval Dates (Only for 1st Year Students) | Tentative Dates of Announcement of Results of non-first year students |
|---|---|---|---|
| 01 | Medical | UG-March 2023<br>PG-March 2023 | March 2023 |
| 02 | Dental | February 2023 | April 2023 |
| 03 | Nursing | UG- April 2023<br>PG- June 2023 | April / May 2023 |
| 04 | Ayurveda | | April / May 2023 |

| | | | |
|---|---|---|---|
| 05 | Homeopathy | For UG Courses as per the Apex Bodies (CCIM / CCH), the last date is 04.03.2023 For PG – Yet to be Announced by Apex Bodies (CCIM/ CCH) | April / May 2023 |
| 06 | Unani | | April / May 2023 |
| 07 | Yoga and Naturopathy Scs | | April / May 2023 |
| 08 | Pharmacy | February 2023 | January 2023 |
| 09 | Physiotherapy and Allied Health Sciences | May 2023 | February 2023 |

**ತೀರ್ಮಾನ: 2022-23 ನೇ ಸಾಲಿನ ಶೈಕ್ಷಣಿಕ ಸಹಾಯಧನಕ್ಕೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ ಚರ್ಚಿಸಿ ವಿವಿಧ ವಿಶ್ವ ವಿದ್ಯಾಲಯಗಳ ದಾಖಲಾತಿ ದಿನಾಂಕಗಳು ಬೇರೆ ಬೇರೆಯಾಗಿರುವುದರಿಂದ ಇತರೆ ಇಲಾಖೆಗಳಾದ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಗಳ ರೀತಿ ಶೈಕ್ಷಣಿಕ ಸಹಾಯಧನ ಅರ್ಜಿ ಸಲ್ಲಿಸಲು ದಿನಾಂಕವನ್ನು ವಿಸ್ತರಿಸಲು ಮಾನ್ಯ ಅಧ್ಯಕ್ಷರು ತಿಳಿಸಿದರು. ಈ ವಿಷಯದ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ:05**

**ಕಾರ್ಮಿಕ ಇಲಾಖೆ ಮತ್ತು ಅದರ ಅಧೀನದಲ್ಲಿ ಬರುವ ಇತರೆ ಮಂಡಳಿಗಳು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಡಿಯಲ್ಲಿ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳ ಕಾರ್ಯ ನಿರ್ವಹಣೆಗೆ ಸಿದ್ಧಪಡಿಸಿದ ಒಂದು ಸಮಗ್ರಹವಾದ (Integrated) ತಂತ್ರಾಂಶವನ್ನು 01/04/2023 ರಿಂದ ಪೂರ್ಣ ಪ್ರಮಾಣದಲ್ಲಿ ಬಳಸಲು ಅನುಮತಿ ಕೋರಿ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳ ವಿತರಣಾ ಕಾರ್ಯವನ್ನು ಸರಳೀಕರಣಗೊಳಿಸಲು ಅವಶ್ಯಕವಿರುವ ಒಂದು ಸಮಗ್ರವಾದ (Integrated) ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಮೆ॥ ಗ್ಲೋಬಲ್ಸ್ ಐಟಿಇಎಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರಿಗೆ ಕೆ.ಟಿ.ಪಿ.ಪಿ ಕಾಯ್ದೆ 1999ರ ಕಲಂ 4ಜಿ ರಡಿಯಲ್ಲಿ ರೂ.8,01,40,000/-ಗಳಿಗೆ ವಿನಾಯಿತಿಯನ್ನು ನೀಡಲಾಗಿರುತ್ತದೆ. ಹಾಗೂ ಸದರಿ ಸಂಸ್ಥೆಯವರೊಂದಿಗೆ ದಿನಾಂಕ:16/02/2021 ರಂದು ಈ ಕೆಳಕಂಡ ಇಲಾಖೆ ಹಾಗೂ ಮಂಡಳಿಗಾಗಿ ತಂತ್ರಾಂಶವನ್ನು ಸಿದ್ಧಪಡಿಸುವಂತೆ ಕರಾರು ಒಪ್ಪಂದವನ್ನು ಮಾಡಿಕೊಂಡು ಮತ್ತು ದಿನಾಂಕ:17/03/2021 ರಂದು ಮೆ॥ ಗ್ಲೋಬಲ್ಸ್ ಐಟಿಇಎಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಕಾರ್ಯದೇಶವನ್ನು ನೀಡಲಾಗಿರುತ್ತದೆ.

1. ಕಾರ್ಮಿಕ ಇಲಾಖೆ.
2. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ.
3. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಮಾಜಿಕ ಭದ್ರತ ಮಂಡಳಿ.
4. ಕಾರ್ಖಾನೆಗಳು, ಬಾಯ್ಲರಗಳು, ಕೈಗಾರಿಕ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ.

ಮುಂದುವರೆದು, ದಿನಾಂಕ;20/09/2022 ರಂದು ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನೂತನ ತಂತ್ರಾಂಶವನ್ನು ಅನಾವರಣಗೊಳಿಸಲಾಗಿತ್ತು ಹಾಗೂ ಸದರಿ ನೂತನ ತಂತ್ರಾಂಶವನ್ನು ದಿನಾಂಕ:20/09/2022 ರಿಂದ ಇಲ್ಲಿಯವರೆಗೆ ಪೈಲೆಟ್ ವರ್ಷನ್ ಅನ್ನು ಉಪಯೋಗಿಸಲಾಗುತ್ತಿತ್ತು, ಸದರಿ ನೂತನ ತಂತ್ರಾಂಶವನ್ನು 01/04/2023 ರಿಂದ ಪೂರ್ಣ ಪ್ರಮಾಣದಲ್ಲಿ ಬಳಸಲು ಅನುಮತಿ ಕೋರಿ.

**ತೀರ್ಮಾನ: ಕಾರ್ಮಿಕ ಇಲಾಖೆ ಮತ್ತು ಅದರ ಅಧೀನದಲ್ಲಿ ಬರುವ ಇತರೆ ಮಂಡಳಿಗಳು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಡಿಯಲ್ಲಿ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳ ಕಾರ್ಯ ನಿರ್ವಹಣೆಗೆ ಸಿದ್ಧಪಡಿಸಿದ**

ಒಂದು ಸಮಗ್ರವಾದ (**Integrated**) ತಂತ್ರಾಂಶವನ್ನು ಅಳವಡಿಸುವ ಬಗ್ಗೆ ಮಾನ್ಯ ಅಧ್ಯಕ್ಷರು ಮಂಡಳಿಯ ಎಲ್ಲಾ ಸದಸ್ಯರೊಂದಿಗೆ ಚರ್ಚಿಸುತ್ತಾ, ಸದರಿ ತಂತ್ರಾಂಶವನ್ನು ಪ್ರಯೋಗಾತ್ಮಕವಾಗಿ ಪೈಲೆಟ್ ಆಧಾರದ ಮೇಲೆ ಕೇವಲ ಫಲಾನುಭವಿಗಳ ನೋಂದಣಿಗಾಗಿ ಅಥವಾ ಒಂದು ಜಿಲ್ಲೆಗೆ ಮಾತ್ರ ಅಥವಾ ಒಂದು ಸೇವೆಗೆ ಮಾತ್ರ ಸೀಮಿತವಾಗಿ ಅಳವಡಿಸಿಕೊಂಡು ತಂತ್ರಾಂಶದ ಸಾದಕ ಭಾದಕಗಳನ್ನು ಪರಿಶೀಲಿಸಿ, ನಂತರ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ-06**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇವರಿಂದ ಸಿದ್ಧಪಡಿಸಲಾಗಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 18 ಸೇವೆಗಳಿಗೆ ಸಂಬಂಧಿಸಿದಂತೆ Business Process Re-Engineering (BPR) ಗಳಿಗೆ ತಂತ್ರಾಂಶವನ್ನು ಸಿದ್ಧಪಡಿಸಲು ಅನುಮತಿಯನ್ನು ಕೋರಿ.**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ವಿವಿಧ ಯೋಜನೆಗಳನ್ನು ಸೇವಾ ಸಿಂಧುವಿನಲ್ಲಿ ಅನ್‌ಲೈನ್ ಮುಖಾಂತರ ಅನುಷ್ಠಾನಗೊಳಿಸಲು ದಿನಾಂಕ: 06.02.2023ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, e-Governance ಮತ್ತು ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ Business Process Re-Engineering (BPR) ಮಾಡಬೇಕೆಂದು ನಿರ್ಣಯಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ನೋಂದಣಿ ಹಾಗೂ ನವೀಕರಣವು ಅತ್ಯಂತ ಸುಲಭವಾಗಿ ಹೆಚ್ಚು ದಾಖಲೆಗಳ ಅವಶ್ಯಕತೆಯಿಲ್ಲದೆ ನಿಜವಾದ ಕಾರ್ಮಿಕರಿಗೆ ನೋಂದಣಿಯಾಗಲು ಸಹಾಯವಾಗುವಂತೆ Design ಮಾಡಲಾಗಿದೆ. ಇದೆ Application ನಲ್ಲಿ ನೋಂದಾಯಿತರಾದ ಹಾಗೂ ನೋಂದಣಿಯಾಗಲು ಇಚ್ಛಿಸುವ ಕಾರ್ಮಿಕರಿಗೆ ಹಾಜರಾತಿ ಕೂಡ ಆನ್‌ಲೈನ್ ಮುಖೇನ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ಇದು ಅನೇಕ ಕಟ್ಟಡ ಕಾರ್ಮಿಕರಲ್ಲದವರೂ ನೋಂದಣಿಯಾಗುವುದನ್ನು ತಡೆಗಟ್ಟಲು ಸಹಾಯವಾಗುತ್ತದೆ. ಆದುದರಿಂದ, e-Module/Application ಸಹ ಕೂಡಲೇ ಅನುಷ್ಠಾನಗೊಳಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (DPAR e-Governance/ಇ-ಆಡಳಿತ) ರವರಿಗೆ ಅನುಮತಿಯನ್ನು ನೀಡಲು ಹಾಗೂ ಅದರ API ಮಂಡಳಿಯಿಂದ ರಚಿಸಲ್ಪಟ್ಟ G-CDMS (Globals Common Database Management System) ಸಾಫ್ಟ್‌ವೇರ್ ಏಕೀಕರಣ (Integration) ಮಾಡಬಹುದಾಗಿದೆ. ಸದರಿ ಮಂಡಳಿಯ ನೂತನ ತಂತ್ರಾಂಶವು ನೀತಿ ನಿಯಮಗಳನ್ನು ಒಳಗೊಂಡ Design ಆಗಿರುತ್ತದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಅನ್‌ಲೈನ್ ತಂತ್ರಾಂಶದ ಮೂಲಕ ನೀಡುತ್ತಿರುವ 18 ಸೇವಗಳ ವಿವರ.ಈ ಕೆಳಕಂಡಂತಿರುತ್ತದೆ.

| Sl. No | Services |
|---|---|
| 1 | Marriage Assistance |
| 2 | Delivery Assistance |
| 3 | Major Ailments Assistance |
| 4 | Accident Assistance |
| 5 | Shrama Samarthaya |
| 6 | Thayi Magu Sahaya Hastha |
| 7 | Continuation of Disability Pension |
| 8 | Disability Pension and Ex-Gratia |
| 9 | Medical Assistance |
| 10 | Continuation of Pension |
| 11 | Application of Pension |
| 12 | Family Pension |

| | |
|---|---|
| 13 | Continuation of Family Pension |
| 14 | Educational Assistance |
| 15 | Funeral Assistance |
| 16 | BMTC/ KSRTC Bus pass Scheme |
| 17 | Registration/ Renewal |
| 18 | Duplicate Identity Card |

ಈ ಮೇಲ್ಕಂಡ ಸೇವೆಗಳನ್ನು ಮಂಡಳಿಯ ದೈನಂದಿನ ಚಟುವಟಿಕೆಯ ಜೊತೆಯಲ್ಲಿ ಅನುಷ್ಠಾನಗೊಳಿಸಲು ಸಹಾಯಕವಾಗುವುದರಿಂದ ಈ ಎಲ್ಲಾ ಯೋಜನೆಗಳ Flow/Applicationಗಳನ್ನು GCDMS ಸಾಫ್ಟ್‌ವೇರ್ ರಚಿಸಿದ ಕಂಪನಿ M/s Globals ITeS Pvt Ltd ರವರಿಗೆ ಸೂಚಿಸಲು ಅನುಮತಿಯನ್ನು ಕೋರಿ.

**ತೀರ್ಮಾನ: ಕಾರ್ಮಿಕ ಇಲಾಖೆ ಮತ್ತು ಅದರ ಅಧೀನದಲ್ಲಿ ಬರುವ ಇತರೆ ಮಂಡಳಿಗಳು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಡಿಯಲ್ಲಿ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳ ಕಾರ್ಯ ನಿರ್ವಹಣೆಗೆ ಸಿದ್ಧಪಡಿಸಿದ ಒಂದು ಸಮಗ್ರವಾದ (Integrated) ತಂತ್ರಾಂಶವನ್ನು ಅಳವಡಿಸುವ ಬಗ್ಗೆ ಮಾನ್ಯ ಅಧ್ಯಕ್ಷರು ಮಂಡಳಿಯ ಎಲ್ಲಾ ಸದಸ್ಯರೊಂದಿಗೆ ಈ ತಂತ್ರಾಂಶದ ಸಾಧಕ ಬಾಧಕಗಳನ್ನ ಚರ್ಚಿಸಿ ಈ ಕೆಳಕಂಡ ಅಂಶಗಳ ಬಗ್ಗೆ ಮಾನ್ಯ ಅಧ್ಯಕ್ಷರು ಗಮನ ಸೆಳೆದರು.**

**ಮಲೆನಾಡು ಪ್ರದೇಶಗಳಲ್ಲಿ ವಿದ್ಯುತ್ ಹಾಗೂ ಅಂತರ್ಜಾಲದ ಸಮರ್ಪಕ ನಿರ್ವಹಣೆಯ ಕೊರತೆ ಇರುವುದರಿಂದ ಈ ತಂತ್ರಾಂಶವನ್ನು ಬಳಸಲು ಅನಾನೂಕೂಲ ಉಂಟಾಗುವುದರಿಂದ ಈ ತಂತ್ರಾಂಶದ ಸಂಪೂರ್ಣ ಪ್ರಯೋಜನ ಕಾರ್ಮಿಕರಿಗೆ ದೊರಕುವ ಸಂಭವ ಕಡಿಮೆ ಇರುತ್ತದೆಂದು ಹಾಜರಿದ್ದ ಕಾರ್ಮಿಕ ಸಂಘದ ಪ್ರತಿನಿಧಿ ಸದಸ್ಯರುಗಳು ತಿಳಿಸಿರುತ್ತಾರೆ. ಇದಕ್ಕೆ ಪ್ರತಿಕ್ರೀಯಿಸುತ್ತಾ ಮಾನ್ಯ ಅಧ್ಯಕ್ಷರು ಮಾತನಡಿ ಇದನ್ನು ಅನುಷ್ಠಾನ ಮಾಡುವ ಕುರಿತು ಪೈಲಟ್ ಯೋಜನೆಯನ್ನು ಕೈಗೊಂಡು, ಅದರ ಯಶಸ್ಸಿನ ನಂತರ ಸಭೆ ಕರೆದು ಸಾಧಕ ಭಾದಕಗಳ ಕುರಿತು ಚರ್ಚಿಸಿ ನಂತರ ಈ ತಂತ್ರಾಂಶವನ್ನು ಅಳವಡಿಸಿಕೊಳ್ಳಲು ಸೂಚಿಸಿ, ಸದ್ಯಕ್ಕೆ ಪ್ರಸ್ತಾವನೆಯನ್ನು ಮುಂದೂಡಬುದೆಂದು ತಿಳಿಸಿದರು. ಇದಕ್ಕೆ ಸಭೆಯ ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ:07

## ಬೆಳಗಾವಿ ಜಿಲ್ಲೆಯ ಕಿತ್ತೂರು ಕೈಗಾರಿಕಾ ಪ್ರದೇಶದ ನಿವೇಶನ ಕುರಿತು

ಮಂಡಳಿಯ ನೋಂದಾಯಿತ ವಲಸೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗೆ ಅನುಕೂಲವಾಗುವಂತೆ ಮಂಡಳಿಯವತಿಯಿಂದ ವಸತಿ ಸಮುಚ್ಚಯ ನಿರ್ಮಾಣ ಮಾಡುವ ಉದ್ದೇಶದಿಂದ ಕೆಐಎಡಿಬಿಗೆ ಸೇರಿದ ಬೆಳಗಾವಿ ಜಿಲ್ಲೆಯ ಕಿತ್ತೂರು ಕೈಗಾರಿಕಾ ಪ್ರದೇಶದಲ್ಲಿ 10 ಎಕರೆ ಜಮೀನನ್ನು ಮಂಡಳಿಯ ಹೆಸರಿಗೆ ಖರೀದಿಸಲು ತಿರ್ಮಾನಿಸಲಾಗಿದ್ದು, ಆದರಂತೆ ಈ ಜಮೀನಿಗೆ ದಿನಾಂಕ 12-11-2013 ರಂದು ಪ್ರತಿ ಎಕರೆಗೆ 25,00,000/-ಗಳಂತೆ ಒಟ್ಟು ರೂ.2,50,00,000/-ಗಳನ್ನು ಪಾವತಿಸಲಾಗಿರುತ್ತದೆ. ಹಲವಾರು ವರ್ಷಗಳಿಂದ ಪತ್ರ ವ್ಯವಹಾರವನ್ನು ನಡೆಸಲಾಗಿದ್ದರೂ ಸಹ ಕೆಐಎಡಿಬಿ ರವರು ಸದರಿ ಜಮೀನನ್ನು ಮಂಡಳಿಯ ಹೆಸರಿಗೆ ನೋಂದಾಯಿಸಿ ಕೊಟ್ಟಿರುವುದಿಲ್ಲ. ಈ ಕಾರಣಕ್ಕಾಗಿ ಈ ಕುರಿತು ನ್ಯಾಯಾಲಯದಲ್ಲಿ ಏಕೆ ಮೊಕ್ಕದಮೆ ಹೂಡಬಾರದೆಂದು ಕೆಐಎಡಿಬಿ ಯವರಿಗೆ ದಿನಾಂಕ:24-01-2023 ರಂದು ಈ ಕಛೇರಿಯಿಂದ ಪತ್ರ ಬರೆಯಲಾಗಿರುತ್ತದೆ.

ಈ ಹಂತದಲ್ಲಿ ಕೆಐಎಡಿಬಿಯವರ 380ನೇ ಸಭೆಯ ನಿರ್ಣಯದಂತೆ, ಬೆಳಗಾವಿ ಜಿಲ್ಲೆಯ ಕಿತ್ತೂರು ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ 94 ರಿಂದ 103 ರಲ್ಲಿ 40,000 ಚ.ಮೀ (9.88 ಎಕರೆ) ನಿವೇಶನಕ್ಕೆ ಪ್ರತಿ ಎಕರೆಗೆ ರೂ. 25,00,000/- ಗಳ ಬದಲಾಗಿ ಪ್ರಸ್ತುತ ಭೂಮಿಯ ಬೆಲೆಯಂತೆ ಪ್ರತಿ ಎಕರೆಗೆ 52 ಲಕ್ಷಗಳಂತೆ ಅಂದರೆ ಹೆಚ್ಚುವರಿಯಾಗಿ ರೂ.2,63,98,000/-ಗಳು, ಇಎಂಡಿ ರೂ.50,000/- ಹಾಗೂ ಕೊಳಚ್ಚೆ ನಿರ್ಮೂಲನಾ ಶುಲ್ಕ ರೂ.1,01,200/-ಗಳು ಸೇರಿ ಒಟ್ಟು ಮೊತ್ತ ರೂ.2,65,49,200/-ಗಳನ್ನು 150 ದಿನಗಳೊಳಗಾಗಿ ಕೆಐಎಡಿಬಿಗೆ ಪಾವತಿಸುವಂತೆ ಸದರಿಯವರು ದಿನಾಂಕ:01-03-2023 ರ ಹಂಚಿಕೆ ಪತ್ರದಲ್ಲಿ ಮಂಡಳಿಗೆ ಸೂಚಿಸಿರುತ್ತಾರೆ.

**ತೀರ್ಮಾನ: ಮಂಡಳಿಯ ನೋಂದಾಯಿತ ವಲಸೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗೆ ಅನುಕೂಲವಾಗುವಂತೆ ಮಂಡಳಿಯವತಿಯಿಂದ ವಸತಿ ಸಮುಚ್ಚಯ ನಿರ್ಮಾಣ ಮಾಡುವ**

**ಉದ್ದೇಶದಿಂದ KIADB ಗೆ ಸೇರಿದ ಬೆಳಗಾವಿ ಜಿಲ್ಲೆಯ ಕಿತ್ತೂರು ಕೈಗಾರಿಕಾ ಪ್ರದೇಶದಲ್ಲಿ 9.88 ಎಕರೆ ಜಮೀನನ್ನು ಮಂಡಳಿಯ ಹೆಸರಿಗೆ ಖರೀದಿಸಲು ತೀರ್ಮಾನಿಸಲಾಗಿರುವ ವಿಷಯಕ್ಕೆ ಕುರಿತು ಚರ್ಚಿಸಿ ಕೆಐಡಿಬಿಯವರು ಹೆಚ್ಚುವರಿಯಾಗಿ ಕೇಳಿರುವ ಮೊತ್ತ ರೂ.2,65,49,200/-ಗಳನ್ನು ಮಂಡಳಿ ವತಿಯಿಂದ ಪಾವತಿ ಮಾಡಿ ನಂತರ ಈ ಸಂಬಂಧ ನ್ಯಾಯಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಲು ತಿಳಿಸಿ ಸಭೆಯು ಸರ್ವಾನುಮತದಿಂದ ಅನುಮೋದನೆಯನ್ನು ನೀಡಲಾಯಿತು.**

**ವಿಷಯ ಸಂಖ್ಯೆ:08**

**ಚಾಮರಾಜನಗರ ಜಿಲ್ಲೆಯ ಬದ್ದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದ ನಿವೇಶನ ಕುರಿತು**

ಕೆಐಎಡಿಬಿಯ ಚಾಮರಾಜನಗರ ಜಿಲ್ಲೆಯ ಬದ್ದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದ 10 ಎಕರೆ ನಿವೇಶನಕ್ಕಾಗಿ ಈ ಮಂಡಳಿಯಿಂದ ಪ್ರತಿ ಎಕರೆಗೆ 22,50,000/-ಗಳಂತೆ ಒಟ್ಟು ರೂ.2,50,00,000/-ಗಳನ್ನು 12-11-2013 ರಲ್ಲಿ ಕೆಐಎಡಿಬಿಗೆ ಪಾವತಿಸಲಾಗಿದ್ದು, ಆದರೆ ದಿನಾಂಕ:04-09-2015 ರಂದು ಪ್ರತಿ ಎಕರೆಗೆ 39.50 ಲಕ್ಷದಂತೆ 10.5 ಎಕರೆ ಹಂಚಿಕೆ ಮಾಡಿ ದಿನಾಂಕ:16-12-2020 ರಂದು ಸ್ವಾಧೀನ ಪತ್ರ ನೀಡಿರುತ್ತಾರೆ. ಮಂಡಳಿ ಹೆಸರಿಗೆ ಸದರಿ ಜಮೀನನ್ನು ನೋಂದಾಯಿಸಿ ಕೊಡುವಂತೆ KIADB ಯವರೊಂದಿಗೆ ಸಭೆಗಳನ್ನು ಹಾಗೂ ಪತ್ರ ವ್ಯವಹಾರ ಮಾಡಲಾಗಿರುತ್ತದೆ, ದಿನಾಂಕ:30-12-2022 ರಂದು ಲೀಸ್ ಕಮ್ ಸೇಲ್ ಅಗ್ರಿಮೆಂಟ್‌ನ್ನು ಕೆಐಎಡಿಬಿ ಮೈಸೂರು ರವರಿಂದ ಪಡೆದು ಮಂಡಳಿ ಹೆಸರಿಗೆ ಶೀಘ್ರ ನೋಂದಾಯಿಸುವಂತೆ ಸಹಾಯಕ ಕಾರ್ಮಿಕ ಆಯುಕ್ತರು, ಮೈಸೂರು ರವರಿಗೆ ಪತ್ರ ಬರೆಯಲಾಗಿರುತ್ತದೆ.

ಆದರೆ, ಕೆಐಎಡಿಬಿಯ 380ನೇ ಸಭೆಯ ದಿನಾಂಕ:24-08-2022 ರಲ್ಲಿ ತೀರ್ಮಾನಿಸಿರುವಂತೆ, ಸದರಿ ಮಂಡಳಿಯ ದಿನಾಂಕ:01-03-2023 ರ ಪತ್ರದಲ್ಲಿ ಸದರಿ ನಿವೇಶನಕ್ಕೆ ಪ್ರಸ್ತುತ ಭೂ ಬೆಲೆ ಪ್ರತಿ ಎಕರೆಗೆ ರೂ.42,50,000/-ದಂತೆ 10.5 ಎಕರೆಗೆ 4 ಕೋಟಿ 25 ಲಕ್ಷ ನಿವೇಶನವು 30 ಮೀ ಅಗಲದ ರಸ್ತೆ ಅಭಿಮುಖವಾದ್ದರಿಂದ 5% ರಷ್ಟು ಹೆಚ್ಚುವರಿ ಮೊತ್ತ ಎಕರೆಗೆ ರೂ.2,12,500/-ಗಳಂತೆ ಒಟ್ಟು ರೂ.10,62,500/, ಇಎಂಡಿ ರೂ.55,000/- ಮತ್ತು ಕೊಳಚೆ ನಿರ್ಮೂಲನಾ ಶುಲ್ಕ ರೂ.1,06,263/- ಅದರಂತೆ ಎಲ್ಲಾ ಸೇರಿ ಒಟ್ಟು ಮೊತ್ತ ರೂ. ರೂ.2,33,50,197/- ಪಾವತಿಸಲು ತಿಳಿಸಿರುತ್ತಾರೆ. ಅಂದರೆ ಒಟ್ಟು ಮೊತ್ತ ರೂ.2,33,50,197/-ಗಳನ್ನು ಕೆಐಎಡಿಬಿಗೆ 30 ದಿನಗಳೊಳಗಾಗಿ ಪಾವತಿಸುವಂತೆ ಸೂಚಿರುತ್ತಾರೆ.

**ಈ ಕುರಿತು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.**

**ತೀರ್ಮಾನ: ಮಂಡಳಿಯ ನೋಂದಾಯಿತ ವಲಸೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗೆ ಅನುಕೂಲವಾಗುವಂತೆ ಮಂಡಳಿಯವತಿಯಿಂದ ವಸತಿ ಸಮುಚ್ಚಯ ನಿರ್ಮಾಣ ಮಾಡುವ ಉದ್ದೇಶದಿಂದ ಕೆಐಎಡಿಬಿಗೆ ಸೇರಿದ ಚಾಮರಾಜನಗರ ಜಿಲ್ಲೆಯ ಬದ್ದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದ 10.5 ಎಕರೆ ನಿವೇಶನಕ್ಕಾಗಿ ಜಮೀನನ್ನು ಮಂಡಳಿಯ ಹೆಸರಿಗೆ ಖರೀದಿಸಲು ತೀರ್ಮಾನಿಸಲಾಗಿರುವ ವಿಷಯಕ್ಕೆ ಕುರಿತು ಚರ್ಚಿಸಿ ಕೆಐಡಿಬಿಯವರು ಹೆಚ್ಚುವರಿಯಾಗಿ ಕೇಳಿರುವ ಮೊತ್ತ ರೂ.2,33,50,197/-ಗಳನ್ನು ಮಂಡಳಿ ವತಿಯಿಂದ ಪಾವತಿ ಮಾಡಿ ನಂತರ ಈ ಸಂಬಂಧ ನ್ಯಾಯಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಲು ತಿಳಿಸಿ ಸಭೆಯು ಸರ್ವಾನುಮತದಿಂದ ಅನುಮೋದನೆಯನ್ನು ನೀಡಲಾಯಿತು.**

**ವಿಷಯ ಸಂಖ್ಯೆ: 9**

**ಗದಗ ಜಿಲ್ಲೆಯ ಗದಗ – ಬೆಟಗೇರಿ ನಗರಸಭೆ ವ್ಯಾಪ್ತಿಯ ನಿವೇಶನ ಕುರಿತು**

ಗದಗ ಜಿಲ್ಲೆಯ ಗದಗ – ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ನಗರ ಆಶ್ರಯ ಯೋಜನೆಯಡಿ ಖರೀದಿಸಲಾದ ಜಮೀನಿನಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಹಾಗೂ ಇತರೆ ವಲಸೆ ಕಾರ್ಮಿಕರಿಗಾಗಿ ತಾತ್ಕಾಲಿಕ ವಸತಿ ಸಮುಚ್ಚಯ ನಿರ್ಮಾಣಕ್ಕಾಗಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ರವರ ದಿನಾಂಕ:04-03-2023 ರ ಪತ್ರ ಹಾಗೂ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃಧಿಕೋಶ ಗದಗ ರವರ ದಿನಾಂಕ:07-03-2023 ರ ಪತ್ರದನ್ವಯ ವಿಸ್ತೀರ್ಣ 10143.76 ಚ.ಮೀ (2.20 ಎಕರೆ) ಜಾಗವನ್ನು ಮಂಡಳಿ ಹೆಸರಿಗೆ ಹಸ್ತಾಂತರಿಸಲು ರೂ.37,00,000/-ಗಳನ್ನು ಪೌರಾಯುಕ್ತರು, ನಗರಸಭೆ ಗದಗ – ಬೆಟಗೇರಿ ಇವರಿಗೆ ಈ ಮಂಡಳಿಯಿಂದ ಬಿಡುಗಡೆಗೊಳಿಸಿದಲ್ಲಿ ಸದರಿ ನಿವೇಶವನ್ನು ಈ

ಮಂಡಳಿಯ ಹೆಸರಿಗೆ ಹಸ್ತಾಂತರಿಸಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಮೊತ್ತವನ್ನು ಬಿಡುಗಡೆಗೊಳಿಸುವ ಸಂಬಂಧ ಸಭೆಯ ಸೂಕ್ತ ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ: ಸದರಿ ವಿಷಯದ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ:10

**ನೋಂದಾಯಿತರಲ್ಲದ 4 ಕಟ್ಟಡ ಕಾರ್ಮಿಕರು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಮೃತ ಪಟ್ಟಿದ್ದು, ಇವರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರವನ್ನು ವಿತರಿಸಲು ಅನುಮೋದನೆ ನೀಡುವ ಬಗ್ಗೆ**

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯ ಅಧ್ಯಕ್ಷರು ಹಾಗೂ ಮಾನ್ಯ ಕಾರ್ಮಿಕ ಸಚಿವರು ಸದರಿ ಪ್ರಕರಣಗಳಿಗೆ ಅನುಮೋದನೆ ನೀಡಿರುತ್ತಾರೆ.

ಮುಂದುವರೆದು ಸದರಿ ಪ್ರಕರಣಗಳು ಅಪಘಾತ ಸ್ಥಳದಲ್ಲಿ ಸಂಭವಿಸದೇ ಸದರಿ ಕಾರ್ಮಿಕರು ಕೆಲಸ ಮುಗಿಸಿಕೊಂಡು ಮಲಗಿರುವ ಸಂದರ್ಭದಲ್ಲಿ ಸಂಭವಿಸಿರುತ್ತದೆ. ಮತ್ತೊಂದು ಪ್ರಕರಣದಲ್ಲಿ ಕಾರ್ಮಿಕ ಎಲ್ & ಟಿ ಕಂಪನಿಯ ಸಿಮೆಂಟ್ ಗೋಡೌನ್ ಬಳಿ ಲಾರಿಗೆ ಸಿಮೆಂಟ್ ಮೂಟೆಗಳನ್ನು ತುಂಬುತ್ತಿರುವಾಗ ಇದ್ದಕ್ಕಿದಂತೆ ನೆಲದ ಮೇಲೆ ಮುಂದಕ್ಕೆ ಮುಗ್ಗರಿಸಿ ಬಿದ್ದು ಪ್ರಜ್ಞಹೀನರಾಗಿದ್ದು ಮೃತಪಟ್ಟಿರುತ್ತಾರೆ ಎಂಬ ಮಾಹಿತಿಯನ್ನು ತಮ್ಮ ಅನುಮೋದನೆಗೆ ತರುತ್ತಾ ಪ್ರಸ್ತುತ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಕೋರಿ ಸುಮಾರು 4 ಅರ್ಜಿಗಳು ಸ್ವೀಕೃತಗೊಂಡಿದ್ದು ಅರ್ಜಿಗಳ ವಿವರ ಈ ಕೆಳಕಂಡಂತಿರುತ್ತದೆ.

**<u>ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಪ್ರಕರಣಗಳ ಪಟ್ಟಿ ಅನುಮೋದನೆಗಾಗಿ</u>**

| ಕ್ರ. ಸಂ | ತನಿಖಾ ವರದಿ ಸಲ್ಲಿಸಿದ ಅಧಿಕಾರಿ | ಕಡತ ಸಂಖ್ಯೆ | ವಿಷಯ | ಮೃತಪಟ್ಟ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಹೆಸರು |
|---|---|---|---|---|
| 1 | ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ-2 ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್ -23/2022-23 | ದಿನಾಂಕ:26-03-2022 ರಂದು ಶ್ರೀ ಚಿತ್ತರಂಜನ್ ಮಹತ ಇವರು ಎಲ್ & ಟಿ ಕನ್ಸ್ಟ್ರಕ್ಷನ್ ಬಿ.ಐ.ಎ.ಎಲ್ ಟಿ2 ಪ್ರಾಜೆಕ್ಟ್, ದೇವನಹಳ್ಳಿ ಇವರ ಎಲ್ & ಟಿ ಲೇಬರ್ ಶೆಡ್ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಇಲ್ಲಿ ಕೆಲಸ ಮಾಡುತ್ತಿದ್ದ, ಇವರು ಕೆಲಸ ಮುಗಿಸಿಕೊಂಡು ರೂಂಗೆ ಬಂದು ಊಟ ಮಾಡಿ ರಾತ್ರಿ 9.30 ಗಂಟೆಯಲ್ಲಿ ಮಲಗಿಕೊಂಡಿದ್ದು, ನಂತರ ಬೆಳಗ್ಗೆ ಕೆಲಸಕ್ಕೆ ಹೋಗಲು ಸದರಿ ಕಾರ್ಮಿಕನನ್ನು ಎದ್ದೇಳಿಸಿದಾಗ ಯಾವುದೇ ಪ್ರತಿಕ್ರಿಯೆ ಮಾಡಲಿಲ್ಲ. ನಂತರ ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ವೈದ್ಯರು ದಾರಿ ಮಧ್ಯದಲ್ಲಿ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. | ಶ್ರೀ ಚಿತ್ತರಂಜನ್ ಮಹತ (ಪಶ್ಚಿಮ ಬಂಗಾಳ) |
| 2 | ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ-2 ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್ -24/2022-23 | ಶ್ರೀ ಸಹದೇಬ್ ಸರ್ದಾರ್ ರವರು ಏರ್‌ಪೋರ್ಟ್‌ನ ಎಲ್ & ಟಿ ಕಂಪನಿಯಲ್ಲಿ ಹೆಲ್ಪರ್ ಆಗಿ ಕೆಲಸ ಮಾಡಿಕೊಂಡಿದ್ದು, ದಿನಾಂಕ:22-04-2022 ರಂದು ಕೆ.ಐ.ಎ.ಎಲ್ ನ ಎಲ್ & ಟಿ ಕಂಪನಿಯ ಸಿಮೆಂಟ್ ಗೋಡನ್ ಬಳಿ ಲಾರಿಗೆ ಸಿಮೆಂಟ್ ಮೂಟೆಗಳನ್ನು ತುಂಬಲು ಕಾರ್ಮಿಕರು | ಶ್ರೀ ಸಹದೇಬ್ ಸರ್ದಾರ್ (ವೆಸ್ ಬೆಂಗಾಲ್) |

| | | | | |
|---|---|---|---|---|
| | | | ಬೆಳಗ್ಗೆ ಕೆಲಸಕ್ಕೆ ಬಂದಿದ್ದು, ಮೃತ ಕಾರ್ಮಿಕನೂ ಸಹ ಬಂದಿದ್ದು, ಇದ್ದಕ್ಕಿಂತೆ ನೆಲದ ಮೇಲೆ ಮುಂದಕ್ಕೆ ಮುಗ್ಗರಿಸಿ ಬಿದ್ದು ಪ್ರಜ್ಞಾಹೀನರಾಗಿದ್ದು ತಕ್ಷಣ ಎಲ್ & ಟಿ ಕಂಪನಿಯ ಮೆಡಿಕಲ್ ಸೆಂಟರ್‌ಗೆ ಕರೆದುಕೊಂಡು ಹೋಗಿ ಅಲ್ಲಿಂದ ದೇವನಹಳ್ಳಿಯ ಆಕಾಶ್ ಆಸ್ಪತ್ರೆಗೆ ದಾಖಲಿಸಿದ್ದು, ಪರೀಕ್ಷಿಸಿದ ವೈದ್ಯರು ಈಗಾಗಲೇ ದಾರಿ ಮಧ್ಯೆದಲ್ಲಿ ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು. | |
| 3 | ಕಾರ್ಮಿಕ ಅಧಿಕಾರಿ ಉಪ ವಿಭಾಗ-3, ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್ -33/2022-23 | ದಿನಾಂಕ:10-10-2022 ರಂದು ಫ್ಯಾಬ್ಯೂಲೆಸ್ ಗ್ಯಾಸ್ಟ್ರೋ ಬಾರ್ ಡೆಮಾಲಿಷ್ ಕೆಲಸ ಸಮಯದಲ್ಲಿ ಕಾರ್ಮಿಕರಿಗೆ ವಾಸಿಸಲು ಬೇರೆ ವ್ಯವಸ್ಥೆ ಮಾಡದೆ ಇರುವುದರಿಂದ ಕೆಲಸ ಮುಗಿಸಿಕೊಂಡು ಕಾರ್ಮಿಕರು ಶೆಡ್‌ನ ಹೊರಗಡೆ ಖಾಲಿ ಜಾಗದಲ್ಲಿ ಮಲಗಿರುತ್ತಾರೆ. ದಿನಾಂಕ:11-10-2022ರ ಬೆಳಗ್ಗೆ 1.00 ಗಂಟೆಯಲ್ಲಿ ಮಳೆಯ ಕಾರಣದಿಂದ ಶಿಥಿಲಗೊಂಡಿದ್ದ ಶೆಡ್‌ನಲ್ಲಿ ಮಲಗಿದ್ದು, ಬೆಳಗ್ಗೆ 6.00 ಗಂಟೆಯ ಸಮಯದಲ್ಲಿ ಮೇಲ್ಚಾವಣಿಯ ಶೀಟ್ ಮುರಿದು ಮಲಗಿದ್ದ ಕಾರ್ಮಿಕರ ಮೇಲೆ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. | 1. ಆರ್ಮಾನ್ ಮಹಮದ್<br>2. ಮಹಮದ್ ಜೈನುದ್ದೀನ್ |

**ತೀರ್ಮಾನ: ಈ ಕುರಿತು ಸುಧೀರ್ಘವಾಗಿ ಚರ್ಚಿಸಿ ಕಟ್ಟಡ ಕಾರ್ಮಿಕರ ಹಿತರಕ್ಷಣೆಯು ಮಂಡಳಿಯ ಜವಾಬ್ದಾರಿಯೆಂದು ಮೇಲ್ಕಂಡ ಮೃತ ಕಾರ್ಮಿಕರ ಅವಲಂಬಿತರಿಗೆ ನೋಂದಾಯಿತರಲ್ಲದ ಕಾರ್ಮಿಕರ ಅಪಘಾತ ಮರಣ ಪರಿಹಾರವಾಗಿ ತಲಾ ರೂ.2ಲಕ್ಷ ಮೊತ್ತದಂತೆ ಪರಿಹಾರ ಮಂಜೂರು ಮಾಡಲು ಸಭೆಯು ಸುಧೀರ್ಘವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದಿಸಿತು.**

## ವಿಷಯ ಸಂಖ್ಯೆ:11

**ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಇತರೆ ವಿಷಯಗಳ ಚರ್ಚೆ**

- 39ನೇ ಸಭೆಯಲ್ಲಿ ಪಡೆದ ವಿಷಯ ಸೂಚಿ 14(ಎ) ರ ಪ್ರಕಾರ ಸದರಿ ವಿಷಯದ ಜೊತೆಗೆ "ಮದುವೆ ಸಹಾಯಧನ" ವನ್ನು ಹೊಸದಾಗಿ ಸೇರ್ಪಡೆಗೊಳಿಸಿ ಅವಧಿಯನ್ನು ಒಂದು ವರ್ಷದವರೆಗೆ ವಿಸ್ತರಿಸಲು ಮಾನ್ಯ ಅಧ್ಯಕ್ಷರು ತಿಳಿಸಿದರು. ಈ ಬಗ್ಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

- ಮಂಡಳಿಯ ವತಿಯಿಂದ ನೀಡಲಾಗುತ್ತಿರುವ ಟ್ಯಾಬ್‌ಗಳನ್ನು ವಿತರಿಸುವ ಮುನ್ನ ಅರ್ಹ ಫಲಾನುಭವಿಗಳಿಗೆ ಮಾತ್ರ ಟ್ಯಾಬ್‌ಗಳು ದೊರಕುವಂತೆ ಕ್ರಮ ಕೈಗೊಳ್ಳಲು ಮಾನ್ಯ ಅಧ್ಯಕ್ಷರು ತಿಳಿಸಿದರು. ಈ ಬಗ್ಗೆ ಮಂಡಳಿಯ ಕಾರ್ಯದರ್ಶಿಗಳು ಮಾತನಾಡಿ ಟ್ಯಾಬ್ ವಿತರಣೆಗಾಗಿ ಮಂಡಳಿಯಿಂದ ಎಸ್‌ಒಪಿ ಸಿದ್ಧಪಡಿಸಲಾಗಿರುತ್ತದೆ. ಇದಲ್ಲದೇ, ಸರ್ಕಾರದ ಆದೇಶದನ್ವಯ ವಿತರಣೆಯ ಪೂರ್ವದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯಲ್ಲಿ ಚರ್ಚಿಸಿ ನಿಯಮಾನುಸಾರ ಅರ್ಹ ಫಲಾನುಭವಿಗಳಿಗೆ ಮಾತ್ರ ಟ್ಯಾಬ್‌ಗಳನ್ನು ತಲುಪಿಸಲು ಕ್ರಮ ಕೈಗೊಳಲಾಗಿದೆ ಎಂದು ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

- ಬೋಗಸ್ ಕಾರ್ಡ್ ರದ್ಧತಿ ಅಭಿಯಾನವನ್ನು ಮತ್ತಷ್ಟು ಚುರುಕುಗೊಳಿಸುವಂತೆ ಮಾನ್ಯ ಅಧ್ಯಕ್ಷರು ತಿಳಿಸಿದರು. ಈ ಬಗ್ಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

- ಶ್ರೀ ಅಶೋಕ ಮೈಲಾರಪ್ಪ ಸುಣಗಾರ ರವರು ನೋಂದಾಯಿತ ಕಟ್ಟಡ ಕಾರ್ಮಿಕರಾಗಿದ್ದು, ಇವರ ನೋಂದಣಿ ಸಂಖ್ಯೆ: Lo-mundagod/UK/RGN/146795/2021-22, Dt: 29-05-2021 ಆಗಿರುತ್ತದೆ. ಇವರು ಹೃದಯ ಚಿಕಿತ್ಸೆಗೆ ಸಂಬಂಧಿಸಿದಂತೆ ಬ್ಲಾಸಮ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು ಇಲ್ಲಿ ದಿನಾಂಕ: 16-02-2023 ರಿಂದ 24-02-2023ರವರೆಗೆ ಚಿಕಿತ್ಸೆ ಪಡೆದು ಖರ್ಚಾಗಿರುವ ಬಿಲ್ ಮೊತ್ತ ರೂ. 1,90,470/-ಗಳ ಮೊತ್ತವನ್ನು ಪ್ರಮುಖ ವೈದ್ಯಕೀಯ ಸಹಾಯಧನ ಅರ್ಜಿಯನ್ನು ಸಲ್ಲಿಸಿ

ಮರುಪಾವತಿಗಾಗಿ ಕೋರಿರುವ ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಲಾಯಿತು. ಈ ಸಂಬಂಧ ಸುಧೀರ್ಘವಾಗಿ ಚರ್ಚಿಸಿದ ನಂತರ ಸಭೆಯು ಸದರಿಯವರಿಗೆ ಅವರ ವೈದ್ಯಕೀಯ ಸಮಾಲೋಚನೆ ಹಾಗೂ ಔಷಧಿಗಳ ವೆಚ್ಚದ ಮರುಪಾವತಿ ರೂ. 1,90,470/-ಗಳನ್ನು ಫಲಾನುಭವಿಗೆ ಮತ್ತು ಅವರ ಅವಲಂಭಿತರ ನೆರವಿಗಾಗಿ ಮಂಡಳಿಯಿಂದ ಮಂಜೂರು ಮಾಡಲು ಸರ್ವಾನುಮತದಿಂದ ಅನುಮೋದನೆ ನೀಡಿತು.

➢ ಮಂಡಳಿಯಿಂದ ನೋಂದಾಯಿತ ಮಹಿಳಾ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪೈಕಿ 06 ತಿಂಗಳ ಒಳಗಿನ ಮಕ್ಕಳಿಗೆ ಹಾಲುಣಿಸುತ್ತಿರುವ ತಾಯಂದಿರರಿಗೆ ನ್ಯೂಟ್ರೀಷನ್ ಆಹಾರ ಒದಗಿಸುವುದರೊಂದಿಗೆ ಅಪೌಷ್ಠಿಕತೆಯಿಂದ ಬಳಲುತ್ತಿರುವ ನೋಂದಾಯಿತ ಮಹಿಳಾ ಕಾರ್ಮಿಕರಿಗೆ ಪೌಷ್ಠಿಕಾಂಶ ಪದಾರ್ಥಗಳನ್ನು ನೀಡುವ ನ್ಯೂಟ್ರೀಷನ್ ಕಿಟ್ ಯೋಜನೆಯನ್ನು ಪ್ರಾದೇಶಿಕವಾರು ಅನುಷ್ಠಾನಗೊಳಿಸಲಾಗಿರುತ್ತದೆ. ಆದರೆ, ನ್ಯೂಟ್ರೀಷನ್ ಕಿಟ್‌ಗಳನ್ನು ಪಡೆಯಲು ಕಾರ್ಮಿಕರು ಕೆಲವೊಂದು ಕಡೆ ನಿರಾಸಕ್ತಿ ವ್ಯಕ್ತಪಡಿಸುತ್ತಿರುವುದಾಗಿ ತಿಳಿಸಿ ಈ ಬಗ್ಗೆ ಮಂಡಳಿಯಿಂದ ಸೂಕ್ತ ನಿರ್ದೇಶನ ನೀಡುವಂತೆ ಕ್ಷೇತ್ರಮಟ್ಟದ ಇಲಾಖಾಧಿಕಾರಿಗಳು ಕೋರಿರುವ ಬಗ್ಗೆ ಚರ್ಚಿಸಲಾಯಿತು. ಆ ಸಂದರ್ಭದಲ್ಲಿ ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಮಂಡಳಿಯಿಂದ ನೋಂದಾಯಿತ ಮಹಿಳಾ ಕಾರ್ಮಿಕರಿಗೆ ವಿತರಿಸಲು ಪೂರೈಸಲಾಗಿರುವ ನ್ಯೂಟ್ರೀಷನ್ ಕಿಟ್‌ಗಳನ್ನು ಬೃಹತ್ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಕಾರ್ಮಿಕರಿಗೆ ಮತ್ತು ನೋಂದಾಯಿತ ಪುರುಷ ಕಾರ್ಮಿಕರ ಅವಲಂಬಿತರ ಪೈಕಿ ಮಕ್ಕಳಿಗೆ ಹಾಲುಣಿಸುತ್ತಿರುವ ತಾಯಂದಿರರಿಗೆ / ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಹಿಳೆಯರಿಗೆ ವಿತರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

➢ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ವಿವಿಧ ರೀತಿಯ ಟೂಲ್‌ಕಿಟ್‌ಗಳನ್ನು ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ನೀಡಲಾಗುತ್ತಿದೆ. ಸದರಿ ಕಿಟ್‌ಗಳನ್ನು ಕಾರ್ಮಿಕರು ನಿರ್ವಹಿಸುತ್ತಿರುವ ವೃತ್ತಿವಾರು ಹಂಚಿಕೆ ಮಾಡಲು ಇಲಾಖೆಯ ಅಧಿಕಾರಿಗಳು ಸೂಚಿಸಲಾಗಿರುತ್ತದೆ. ಆದರೆ, ಅದೇ ಟ್ರೇಡ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಹೆಲ್ಪರ್‌ಗಳಿಂದ ಕಿಟ್‌ಗಳ ಬೇಡಿಕೆ ಇರುವುದಾಗಿ ಹಲವಾರು ಕಾರ್ಮಿಕ ಸಂಘಟನೆಗಳ ಪದಾದಿಕಾರಿಗಳು ಹಾಗೂ ಸ್ಥಳೀಯ ಜನ ಪ್ರತಿನಿದಿಗಳು ಈ ವಿಷಯವನ್ನು ತಮಗೆ ತಿಳಿಸಿರುವುದಾಗಿ ಸದಸ್ಯರುಗಳು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಕುರಿತು ಚರ್ಚಿಸಿ, ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ನೀಡಿ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಕೋರಿರುವಂತೆ ಟೂಲ್ ಕಿಟ್‌ಗಳನ್ನು ಅದೇ ವೃತಿಯ ವರ್ಗದಲ್ಲಿ ಕೆಲಸ ನಿರ್ವಹಿಸುತ್ತಿರುವ ನೋಂದಾಯಿತ ಸಹಾಯಕರಿಂದ ಅವರು ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಬಗ್ಗೆ ಮುಚ್ಚಳಿಕೆಯನ್ನು ಪಡೆದು ವಿತರಿಸಲು ಕ್ರಮ ವಹಿಸುವಂತೆ ನಿರ್ಣಯ ಕೈಗೊಳ್ಳಲಾಯಿತು.

➢ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನೂಕೂಲವಾಗುವಂತೆ 6 ರಿಂದ 8ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ಹಾಗೂ 9 ರಿಂದ 12 ರವರೆಗಿನ ತರಗತಿಗಳಲ್ಲಿ ಓದುತ್ತಿರುವ ಮಕ್ಕಳಿಗೆ ಶಾಲಾ ಕಿಟ್‌ಗಳನ್ನು ನೀಡಲಾಗುತ್ತಿದೆ. ಆದರೆ, ಸದರಿ ಶಾಲಾ ಕಿಟ್‌ಗಳನ್ನು ನೀಡುವಾಗ ವಿದ್ಯಾರ್ಥಿಗಳು ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ಮೂಲ ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆದು ಕಿಟ್‌ಗಳನ್ನು ಹಂಚಲು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಮಂಡಳಿಯಿಂದ ನಿರ್ದೇಶನ ನೀಡಲಾಗಿರುತ್ತದೆ. ಆದರೆ, ಪ್ರಸ್ತುತ ಹಲವಾರು ವಿದ್ಯಾ ಸಂಸ್ಥೆಗಳಲ್ಲಿ ಪರೀಕ್ಷೆಗಳು ನಡೆಯುತ್ತಿದ್ದು, ಕೆಲವು ವಿದ್ಯಾಸಂಸ್ಥೆಗಳು ಬೇಸಿಗೆ ರಜೆಯ ಪ್ರಯುಕ್ತ ಮುಚ್ಚಲಾಗಿರುವುದರಿಂದ / ಪೋಷಕರು ಮೂಲ ವ್ಯಾಸಂಗ ಪ್ರಮಾಣ ಪತ್ರವನ್ನು ಹಾಜರು ಪಡಿಸಲು ಕಷ್ಟವಾಗಿರುತ್ತದೆಂದು ಸಭೆಯಲ್ಲಿ ಕಾರ್ಮಿಕ ಸಂಘದ ಪ್ರತಿನಿಧಿ ಸದಸ್ಯರುಗಳು ತಿಳಿಸಿರುತ್ತಾರೆ. ಇದಕ್ಕೆ ಸಭೆಯಲ್ಲಿ ಉಳಿದ ಸದಸ್ಯರು ತಮ್ಮ ಸಹಮತಿಯನ್ನು ಸೂಚಿಸಿದರು. ಈ ಹಿನ್ನಲೆಯಲ್ಲಿ ಇಂತಹ ಪೋಷಕರು ತಮ್ಮ ಮಕ್ಕಳು ಅನ್ವಯವಾಗುವ ತರಗತಿಗಳಲ್ಲಿ ವ್ಯಾಸಂಗ

ಮಾಡುತ್ತಿರುವ ಬಗ್ಗೆ ಬದಲ್ಲಿ ದಾಖಲೆಗಳು ಅಂದರೆ ಮಕ್ಕಳ ಶಾಲಾ ಗುರುತಿನ ಚೀಟಿ, ಶಾಲಾ ಶುಲ್ಕ ಸಂದಾಯದ ರಶೀದಿ, ಅಂಕ ಪಟ್ಟಿ ಅಥವಾ ಇನ್ನಿತರ ದಾಖಲೆಗಳನ್ನು ಪಡೆದು ಕಿಟ್‌ಗಳನ್ನು ನೀಡುವುದು ಸೂಕ್ತವೆಂದು ಅಧ್ಯಕ್ಷರು ಅಭಿಪ್ರಾಯ ಪಟ್ಟಿರುತ್ತಾರೆ. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

- ಮಂಡಳಿಯ ಖರ್ಚು ವೆಚ್ಚದ ಆಗುಹೋಗುಗಳನ್ನು ನಿರ್ವಹಿಸಲು, ಮಂಡಳಿಯ ಲೆಕ್ಕ ಪತ್ರ ಶಾಖೆಗೆ ಸಹಾಯವಾಗುವಂತೆ Comprehensive online Accounting System ತಂತ್ರಾಂಶವನ್ನು ನೂತನವಾಗಿ ಅಭಿವೃದ್ಧಿಪಡಿಸಲು ಹಾಗೂ ಮಂಡಳಿಯ ಸೆಸ್ ಮೊತ್ತವನ್ನು ಪಾವತಿಸಿ ರಸೀದಿಗಳನ್ನು ಪಡೆಯಲು Online Payment Gateway Mode ಇಲ್ಲದಿರುವ ಕಾರಣ ನೂತನವಾಗಿ Online Cess and Data Integration ತಂತ್ರಾಂಶವನ್ನು, ಅಭಿವೃದ್ಧಿಪಡಿಸಲು ದಿನಾಂಕ:25/08/2021 ರಂದು ಮೆ॥ ಕಿಯೋನಿಕ್ಸ್ ಸಂಸ್ಥೆಯವರಿಗೆ ಕಾರ್ಯದೇಶ ನೀಡಲಾಯಿತು ಹಾಗೂ ಸದರಿ ಸಂಸ್ಥೆಯವರೊಂದಿಗೆ ದಿನಾಂಕ:13/01/2022 ರಂದು Agreement ಅನ್ನು ಮಾಡಲಾಗಿತು. ಮುಂದುವರೆದು, ಮೆ॥ ಕಿಯೋನಿಕ್ಸ್ ಸಂಸ್ಥೆಯವರು ದಿನಾಂಕ:12/01/2022 ರಿಂದ ತಂತ್ರಾಂಶದ ಕಾರ್ಯವನ್ನು ಪಾರಂಭಿಸಿರುತ್ತಾರೆ ಹಾಗೂ Agreement ಗಳನ್ವಯ ಮಂಡಳಿಯಿಂದ ನೀಡಿರುವ ಒಂದು ವರ್ಷದ ಅವಧಿಯು ದಿನಾಂಕ:11/01/2023 ರಂದು ಕೊನೆಗೊಂಡಿರುತ್ತದೆ. ತಂತ್ರಾಂಶದ ಕಾರ್ಯದಲ್ಲಿ bank Statement data for the financial year 2020-21 and attempted to much with the audit statements ಹಾಗೂ Database migration ಮಾಡಬೇಕಾರುವುದರಿಂದ ವಿಳಂಬವಾಗಿರುತ್ತದೆ. ಆದುದ್ದರಿಂದ ಸದರಿ ತಂತ್ರಾಂಶದ ಕಾರ್ಯಕ್ಕೆ ನೀಡಿರುವ ಕಾರ್ಯದೇಶದ ಅವಧಿಯನ್ನು ದಿನಾಂಕ 11/04/2023 ರವರೆಗೆ Extension ನೀಡುವಂತೆ ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಕೋರಿರುತ್ತಾರೆ. ಆದರಂತೆ ಸದರಿ ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.
- ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಣಿ, ನವೀಕರಣ ಹಾಗೂ ವಿವಿಧ ಸೌಲಭ್ಯಗಳು ಸೇವಾಸಿಂಧು ತಂತ್ರಾಂಶದ ಮೂಲಕ ಅರ್ಜಿಗಳನ್ನು ಸಲ್ಲಿಸಲಾಗುತಿದ್ದು ಹಾಗೂ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಅಧಿಕಾರಿಗಳು ಸೇವಾ ಸಿಂಧು ತಂತ್ರಾಂಶದ ಮೂಲಕ ಅನುಮೋದನೆ ಮಾಡಲಾಗುತ್ತಿದ್ದು, ಮಂಡಳಿಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರ ಇಬ್ಬರು ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ಸೌಲಭ್ಯವನ್ನು ನೀಡಲಾಗುತ್ತಿದ್ದು, ಸದರಿ 2022-23ನೇ ಸಾಲಿನ ಶೈಕ್ಷಣಿಕ ಸಹಾಯಧನದ ಅರ್ಜಿಗಳನ್ನು ಸೇವಾ ಸಿಂಧು ತಂತ್ರಾಂಶದ ಮೂಲಕ ಪ್ರಾರಂಭಿಸಲು ದಿನಾಂಕ:06/02/2023 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಇ-ಆಡಳಿತ ಇಲಾಖೆ ರವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ತಿರ್ಮಾನಿಸಲಾಯಿತು ಹಾಗೂ 2022-23ನೇ ಸಾಲಿನ ಶೈಕ್ಷಣಿಕ ಸಹಾಯಧನದ ಅರ್ಜಿಗಳನ್ನು ಸೇವಾ ಸಿಂಧು ತಂತ್ರಾಂಶದ ಮೂಲಕ ದಿನಾಂಕ:13/02/2023 ರಿಂದ ಪ್ರಾರಂಭಿಸಲಾಯಿತು. ಮುಂದುವರೆದು, ಮಂಡಳಿಯಲ್ಲಿ ದಿನಾಂಕ:01/06/2022ರ ಮೊದಲು ನೋಂದಣಿಯಾದ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮಾತ್ರ 2022-23ನೇ ಸಾಲಿನ ಶೈಕ್ಷಣಿಕ ಸಹಾಯಧನದ ಅರ್ಜಿಗಳನ್ನು ಪರಿಗಣಿಸಿ, ಶೈಕ್ಷಣಿಕ ಸಹಾಯಧನದ ಮೊತ್ತವನ್ನು ಡಿಬಿಟಿ ಮೂಲಕ ಪಾವತಿಸಲು ಕ್ರಮವಹಿಸುವಂತೆ ಮಾನ್ಯ ಅಧ್ಯಕ್ಷರು, ಕಾರ್ಯದರ್ಶಿಯವರಿಗೆ ಸೂಚಿಸಿದರು ಇದಕ್ಕೆ ಸಭೆಯು ಅನುಮೋದನೆ ನೀಡಿತು. ಆದರಂತೆ ಸದರಿ ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.
- ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕೇಂದ್ರ ಕಛೇರಿಯಲ್ಲಿ ವಿವಿಧ ವರ್ಗದ ಸಿಬ್ಬಂದಿಗಳನ್ನು ಹಾಗೂ ಮಂಡಳಿಯ ವತಿಯಿಂದ ಕಾರ್ಮಿಕ ಇಲಾಖೆಯ ಕ್ಷೇತ್ರ ಮಟ್ಟದ ಕಛೇರಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ಹಾಗೂ ಎಕ್ಸಿಕ್ಯೂಟೀವ್‌ಗಳನ್ನು ನಿಯೋಜಿಸಲಾಗಿರುತ್ತದೆ.

ಇವರಲ್ಲಿ ಗಣನೀಯ ಸಂಖ್ಯೆ ಸಿಬ್ಬಂದಿಗಳು ಮಹಿಳಾ ನೌಕರರಾಗಿರುತ್ತಾರೆ. ಹೆರಿಗೆ ಭತ್ಯೆ ಕಾಯ್ದೆ 1961 ರ ಕಲಂ 5 ರನ್ವಯ ಮಹಿಳಾ ನೌಕರರಿಗೆ 26 ವಾರಗಳ ಹೆರಿಗೆ ರಜೆ/ ಸೌಲಭ್ಯವನ್ನು ನೀಡಬೇಕಾಗಿರುತ್ತದೆ. 10ಕ್ಕಿಂತ ಹೆಚ್ಚು ನೌಕರಿರುವ ಎಲ್ಲಾ ಸಂಸ್ಥೆಗಳಿಗೆ ಈ ಕಾಯ್ದೆಯು ಅನ್ವಯವಾಗುತ್ತದೆ. ಮಂಡಳಿಯು ಇಎಸ್‌ಐ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದರಿಂದ ಈ ಅವಧಿಯಲ್ಲಿ ಇಎಸ್‌ಐ ಕಾಯ್ದೆ ಪ್ರಾವಧಾನಗಳನ್ವಯ ಹೆರಿಗೆ ರಜೆ / ಸೌಲಭ್ಯವನ್ನು ಮಹಿಳಾ ನೌಕರರಿಗೆ ಒದಗಿಸಲಾಗುತ್ತಿದೆ. ಆದರೆ ಇಎಸ್‌ಐ ಕಾಯ್ದೆಯಡಿ ಮಾಸಿಕ ರೂ. 21,000/- ಗಳ ವರೆಗೆ ವೇತನ ಪಡೆಯುವ ಮಹಿಳಾ ನೌಕರರು ಮಾತ್ರ ಈ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ. ವೇತನ ಮಿತಿಯು ರೂ. 21,000/- ಗಳು ಮೀರಿದ್ದಲ್ಲಿ ಇಎಸ್‌ಐ ಕಾಯ್ದೆಗಳ ಪ್ರಾವಧಾನಗಳನ್ವಯ ಹೆರಿಗೆ ರಜೆ / ಸೌಲಭ್ಯವನ್ನು ಪಡೆಯಲು ಮಹಿಳಾ ನೌಕರರು ಅರ್ಹರಿರುವುದಿಲ್ಲ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳ ವೇತನವು ಇಎಸ್‌ಐ ಕಾಯ್ದೆಯಲ್ಲಿ ನಿಗಧಿಪಡಿಸಲಾದ ರೂ. 21,000/- ಗಳಿಗೂ ಹೆಚ್ಚಾಗಿರುತ್ತದೆ. ಅವರು ಇಎಸ್‌ಐ ಕಾಯ್ದೆಯ ವ್ಯಾಪ್ತಿಗೆ ಒಳಪಡದೆ ಇರುವುದರಿಂದ ಅವರು ಹೆರಿಗೆ ರಜೆ / ಸೌಲಭ್ಯದಿಂದ ವಂಚಿತರಾಗುವ ಸಂಭವವಿರುತ್ತದೆ. ಹೆರಿಗೆ ಭತ್ಯೆ ಕಾಯ್ದೆಯು ಮಹಿಳೆಯರ ಹಕ್ಕುಗಳ ರಕ್ಷಣೆಯ ಉದ್ದೇಶವನ್ನು ಹೊಂದಿರುವುದರಿಂದ ಇಎಸ್‌ಐ ಕಾಯ್ದೆಯ ವ್ಯಾಪ್ತಿಗೆ ಒಳಪಡದ ಸಿಬ್ಬಂದಿಗಳಿಗೂ ಕೂಡ ಈ ಸಂರಕ್ಷಣೆಯನ್ನು ವಿಸ್ತರಿಸುವುದು ಅವಶ್ಯಕವಾಗಿದ್ದು, ಇದರಿಂದ ಮಹಿಳೆಯರ ನೈಸರ್ಗಿಕ ಹಕ್ಕು ಪೋಷಿಸಿದಂತಾಗಿ ಸಮಾನತೆಗೆ ಅವಕಾಶವನ್ನು ನೀಡುವುದರೊಂದಿಗೆ ಹೆರಿಗೆ ಭತ್ಯೆ ಕಾಯ್ದೆಯ ಸಮರ್ಪಕ ಅನುಷ್ಠಾನವಾಗುತ್ತದೆ. ಇಎಸ್‌ಐ ಕಾಯ್ದೆಯಡಿ ನಿಗಧಿಪಡಿಸಿರುವ ವೇತನ ಮಿತಿಯನ್ನು ಮೀರಿದ ವೇತನವನ್ನು ಪಡೆಯುತ್ತಿರುವ ಮಂಡಳಿಯ ಎಲ್ಲಾ ಸಿಬ್ಬಂದಿಗಳು ಅಂದರೆ ಮಂಡಳಿಯ ಕೇಂದ್ರ ಕಛೇರಿಯಲ್ಲಿ ಹಾಗೂ ಕಾರ್ಮಿಕ ಇಲಾಖೆಯ ಕ್ಷೇತ್ರಮಟ್ಟದ ಕಛೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಮಹಿಳಾ ಸಿಬ್ಬಂದಿಗಳಿಗೆ ಹೆರಿಗೆ ಭತ್ಯೆ ಕಾಯ್ದೆ 1961 ಅನ್ನು ವಿಸ್ತರಿಸುವುದು ಸೂಕ್ತವೆಂದು ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿರುತ್ತಾರೆ. ಆದುದರಿಂದ ಸದರಿ ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ವೇತನ ಮಿತಿ ಮಾಸಿಕ ರೂ.21,000/- ಮೀರಿರುವ ಸಿಬ್ಬಂಧಿಗಳಿಗೂ ಕೊಡ ಹೆರಿಗೆ ಭತ್ಯೆ ಕಾಯ್ದೆ, 1961 ರ ಕಲಂ. 5 ರ ಪ್ರಾವದಾನಗಳನ್ನು ವಿಸ್ತರಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸೂಕ್ತ ಆದೇಶ ಹೊರಡಿಸುವಂತೆ ತೀರ್ಮಾನಿಸಲಾಯಿತು.

**ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಸಭೆಯಲ್ಲಿ ಹಾಜರಿದ್ದ ಮಂಡಳಿಯ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳಿಗೆ ವಂದನಾರ್ಪಣೆ ಸಲ್ಲಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು,**
**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ**
**ಕಾರ್ಮಿಕರಕಲ್ಯಾಣ ಮಂಡಳಿ,**
**ಬೆಂಗಳೂರು**